**ಸಾಕ್ಷಿಯನ್ನು ದಿನಾಂಕ 06-07-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಟಿ.ಸಿ.ಜಿ ವಕೀಲರಿಂದಃ ಇಲ್ಲಾ**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಟಿ.ಜಿ.ಎಸ್ ವಕೀಲರಿಂದಃ**

1. ದಾವಾ ಸ್ವತ್ತು ಸರ್ವೆ ನಂಬರ್ 82 ರಲ್ಲಿದೆ. ಅದರ ನಿವೇಶನ ಸಂಖ್ಯೆ ನನಗೆ ನೆನಪಿಲ್ಲ. ದಾವಾ ಸ್ವತ್ತಿನಲ್ಲಿರುವ ಮನೆಯನ್ನು ಯಾವ ಇಸವಿಯಲ್ಲಿ ಕಟ್ಟಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ಗಂಡ ಬದುಕಿದ್ದಾಗಲೇ ಅಂದರೆ ಸುಮಾರು 2003-04 ನೇ ಸಾಲಿನಲ್ಲಿ ಕಟ್ಟಿದ್ದೇವೆ ಎನ್ನುತ್ತಾರೆ. ಮನೆ ಕಟ್ಟಲು ಪ್ರತಿವಾದಿಯಿಂದ ಪರವಾನಿಗೆ ಪಡೆದಿಲ್ಲ. ದಾವಾ ಸ್ವತ್ತನ್ನು 94-ಸಿ ರಂತೆ ಅರ್ಜಿ ಹಾಕಿ ನನ್ನ ಗಂಡ ತಾಲ್ಲೂಕು ಪಂಚಾಯತಿಯಿಂದ ಮಂಜೂರಿ ಮಾಡಿಸಿಕೊಂಡಿದ್ದರು. ದಾವಾ ಸ್ವತ್ತು 30x40 ಅಡಿ ವಿಸ್ತೀರ್ಣ ಇದ್ದು, ಅದರ ಪೂರ್ವಕ್ಕೆ ನಗರ ಸಭೆ ರಸ್ತೆ ಪಶ್ಚಿಮಕ್ಕೆ ಸರ್ಕಾರಿ ಜಾಗ, ಉತ್ತರಕ್ಕೆ ಸರ್ವೆ ನಂಬರ್ 85 ಮತ್ತು ದಕ್ಷಿಣಕ್ಕೆ ಚಿತ್ರ ಮಂಜಣ್ಣ ರವರ ನಿವೇಶನ ಇದೆ.

2. ತಹಶೀಲ್ದಾರ್ ರವರು ನನ್ನ ಗಂಡನ ಹೆಸರಿಗೆ ದಾವಾ ಸ್ವತ್ತಿನ ಹಕ್ಕು ಪತ್ರ ಕೊಟ್ಟಿದ್ದರು ಎಂದರೆ ಸರಿ. ದಾವಾ ಸ್ವತ್ತು ನಗರ ಸಭೆ ವಾರ್ಡ್ ನಂಬರ್ 14 ರ ವ್ಯಾಪ್ತಿಯಲ್ಲಿದೆ ಎಂದರೆ ಸರಿ. ನಗರ ಸಭೆ ವ್ಯಾಪ್ತಿಗೆ ಬರುವ ಯಾವುದೇ ಆಸ್ತಿಯ ಸಂಬಂಧ 94-ಸಿ ಅಡಿ ತಹಶೀಲ್ದಾರ್ ರವರು ಮಂಜೂರಾತಿ ಅಥವಾ ಹಕ್ಕು ಪತ್ರ ಕೊಡಲು ಬರುವುದಿಲ್ಲ ಮತ್ತು ಸದರಿ ವಿಷಯ ಗೊತ್ತಿದ್ದಿದ್ದರು ತಹಶೀಲ್ದಾರ್ ರವರ ಮೇಲೆ ರಾಜಕೀಯ ಒತ್ತಡ ಹೇರಿ ಹಕ್ಕು ಪತ್ರ

ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಹಕ್ಕು ಪತ್ರದಂತೆ ನನ್ನ ಗಂಡ ಜೀವಿತಾವಧಿಯಲ್ಲಿ ದಾವಾ ಸ್ವತ್ತಿನ ಖಾತೆ ಅವರ ಹೆಸರಿಗೆ ಆಗಿರಲಿಲ್ಲ ಎಂದರೆ ಸರಿ. ನನ್ನ ಗಂಡ ತೀರಿಕೊಂಡ ನಂತರ ನಗರ ಸಭೆಗೆ ತಪ್ಪು ಮಾಹಿತಿ ಕೊಟ್ಟು ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೇನೆ ಎನ್ನುವುದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ತಹಶೀಲ್ದಾರ್ ರವರಿಗೆ ಹಕ್ಕು ಪತ್ರ ಕೊಡಲು ಅಧಿಕಾರ ಇಲ್ಲದ ಕಾರಣ ಸದರಿ ಹಕ್ಕು ಪತ್ರಕ್ಕೆ ಕಾನೂನು ಮಾನ್ಯತೆ ಇಲ್ಲ ಮತ್ತು ಸದರಿ ಹಕ್ಕು ಪತ್ರದ ರೀತಿಯ ದಾವಾ ಸ್ವತ್ತಿನ ಮೇಲೆ ನನಗೆ ಮಾಲಿಕತ್ವ ಬರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ನಾನು ಶುದ್ಧ ಹಸ್ತಳಾಗಿ ಬಂದಿಲ್ಲ ಹಾಗಾಗಿ ಈ ದಾವೆಯಲ್ಲಿ ಕೇಳಿರುವ ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**